ಬ್ಯಾಂಕಂಗಳಲ್ಲಿ ಸಣ್ಣ ಪ್ರಮಾಣದ ಸೊತ್ತ ತೆಗೆದುಂಕೊಳ್ಳದೆ ಇರುವುದು.

೭೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಕರ್ನಾಟಕ ಸರ್ಕಾರಿ ವ್ಯವಹಾರಗಳಲ್ಲಿ ಹಣ ಪಾವತಿ ಮಾಡಬೇಕಾದಲ್ಲಿ ೧೮೦-೦೦ ರೂ. ಗಿಂತ ಕಡಿಮೆ ಸೊತ್ತದ ಹಣವನ್ನು ಚಲನ್ ಮೂಲಕವಾಗಿ ಸ್ವೀಕರಿಸಕೂಡದೆಂದು ಸರ್ಕಾರ ಆಜ್ಞೆ ಹೊರಡಿಸಿರುವುದೆ ?

೨) ಜಿಲ್ಲಾ ಬ್ಯಾಂಕ್‌ನವರು ಮಾತ್ರ ಸಣ್ಣ ಸೊತ್ತದ ಹಣವನ್ನು ಪಡೆಯುತ್ತಿದ್ದಾರೆಂಬುದೂ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

೩. ಹಾಗಿದ್ದಲ್ಲಿ ಸರ್ಕಾರಿ ಬ್ಯಾಂಕುಗಳಿಂದಿಗೆ ವ್ಯವಹರಿಸಿ ಇದನ್ನು ಸರಿಪಡಿಸಲಾಗುವುದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

೧) ಹೌದು.

೨) ಇಲ್ಲ.

೩) ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು.

೭೫೪. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ ಕ್ಷೇತ್ರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈಗ ಎಷ್ಟು ಜನ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿದ್ದಾರೇ ?

ಆ) ಈಗ ಇರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಲ್ಲಿ ಕರ್ನಾಟಕ ರಾಜ್ಯದವರೆಷ್ಟು ?

ಇ) ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ರಾಜ್ಯಕ್ಕೆ ಬೇರೆ ಯಾವ ಯಾವ ರಾಜ್ಯಗಳಿಂದ ಬಂದಿರುತ್ತಾರೆ.

ಈ) ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳಿಲ್ಲದೇ ಸ್ಥಳೀಯ ಕೆಎಎಸ್ ಅಧಿಕಾರಿಗಳಿಂದಲೇ ರಾಜ್ಯದ ಅಧಿಕಾರವನ್ನು ನಡೆಸಲು ಸಾಧ್ಯವಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ೨೪೨ ಐಎಎಸ್ ಅಧಿಕಾರಿಗಳು ಮತ್ತು ೧೦೯ ಐಪಿಎಸ್ ಅಧಿಕಾರಿಗಳು.

ಆ) ೧೨೧ ಐಎಎಸ್ ಅಧಿಕಾರಿಗಳು ಮತ್ತು ೫೬ ಐಪಿಎಸ್ ಅಧಿಕಾರಿಗಳು.

ಇ) ತಮಿಳುನಾಡು — ಹರಿಯಾಣ
ಕೇರಳ — ಅಸ್ಸಾಂ ಮತ್ತು ಈತಾನ್ಯ ರಾಜ್ಯಗಳು
ಉತ್ತರ ಪ್ರದೇಶ — ಮಧ್ಯ ಪ್ರದೇಶ
ಆಂಧ್ರ ಪ್ರದೇಶ — ಮಹಾರಾಷ್ಟ್ರ
ಬಿಹಾರ್ — ಪಂಜಾಬ್
ರಾಜಸ್ಥಾನ್ — ನವದೆಹಲಿ
ಪಶ್ಚಿಮಬಂಗಾಳ — ಜಮ್ಮು ಕಾಶ್ಮೀರ್
ಹಿಮಾಚಲ ಪ್ರದೇಶ — ಗುಜರಾತ್
ಒರಿಸ್ಸಾ

ಈ) ಇಲ್ಲ.